<u>1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು</u>

ಸಿಸಿ ನಂಃ 926 2011
ಅಸಾ. 5 ಚಾಸಾ. 8

ಸಾಕ್ಷಿದಾರರ ಹೆಸರು ಃ ಸಂತೋಷ್
ತಂದೆಯ ಹೆಸರು ಃ ಸೀತಾರಾಮರಾವ್
ವಯಸ್ಸು ಃ 40 ವರ್ಷ
ಉದ್ಯೋಗ ಃ ಟ್ರಾವೆಲ್ಸ್ ವ್ಯವಹಾರ
ವಾಸ ಃ ಜೆಪಿ ನಗರ ಬೆಂಗಳೂರು

<u>ಸಾಕ್ಷಿಯನ್ನು ಕರೆಸಿ ದಿಃ 17.05.2016 ರಂದು ಪ್ರಮಾಣ ಮಾಡಿಸಲಾಯಿತು.</u>
ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ರಾ ಹಿಂದೆ ಭಾರ್ಗವ ಟೆಲಿಕಾಂ ಎಂಬ ಹೆಸರಿನಲ್ಲಿ ವಿವಿಧ ಕಂಪೆನಿಗಳ ಸಿಮ್‌ಕಾರ್ಡ್‌ಗಳನ್ನು ಮಾರುವ ಅಂಗಡಿಯನ್ನು ಜೆಪಿ ನಗರದಲ್ಲಿ ಇಟ್ಟಿದ್ದೆನು. ಯಾವುದೇ ಗ್ರಾಹಕರು ಹೊಸ ಸಿಮ್ ಕಾರ್ಡ್ ಪಡೆಯಲು ಬಂದಾಗ ನಾವು ಆತನಿಂದ ಸಿಮ್ ಕಾರ್ಡ್ ಆಕ್ಟಿವೇಶನ್ ಮಾಡುವ ಸಲುವಾಗಿ ಆತನಿಂದ ಒಂದು ಅರ್ಜಿಯನ್ನು ಭರ್ತಿ ಮಾಡಿಸಿಕೊಂಡು ಆತನಿಗೆ ಬರವಣಿಗೆ ಬರದೇ ಇದ್ದರೆ ನಾನೇ ಅರ್ಜಿ ಭರ್ತಿ ಮಾಡಿ ಆತನಿಂದ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆದು ಅರ್ಜಿಗೆ ಅರ್ಜಿದಾರನ ಪಾಸ್‌ಪೋರ್ಟ್ ಸೈಜಿನ ಫೋಟೋವನ್ನು ಸದರಿ ಅರ್ಜಿಗೆ ಲಗತ್ತಿಸಿ ಅರ್ಜಿದಾರನಿಂದ ಆತನ ಗುರುತಿನ ಚೀಟಿಯ ನಕಲನ್ನು ಪಡೆದು ಸಿಮ್ ಕಾರ್ಡ್‌ನ್ನು ನೀಡುತ್ತೇವೆ. ಸಾಕ್ಷಿಯು ಲೋಕೇಶ್ ಎಂಬ ಹೆಸರಿನ ವ್ಯಕ್ತಿಯು ಏರ್‌ಸೆಲ್ ಸಿಮ್ ಆಕ್ಟಿವೇಶನ್ ಗಾಗಿ ದಿನಾಂಕ 16.01.2009 ರಂದು ನೀಡಿರುವ ಅರ್ಜಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸದರಿ ಸಿಎಎಫ್‌ನ್ನು ನಾನೇ ಪಡೆದಿದ್ದು ಅದರ ಮೇಲೆ ನಮ್ಮ ಅಂಗಡಿಯ ಸೀಲ್ ಇರುತ್ತದೆ. ಸದರಿ ಸಿಎಎಫ್ ಫಾರ್ಮ್ ಅಡಿಯಲ್ಲಿ ಲೋಕೇಶ್ ಎಂಬ ಗ್ರಾಹಕರಿಗೆ ಏರ್‌ಟೆಲ್‌ನ ಮೊಬೈಲ್ ಸಂಖ್ಯೆ 9632885109 ಎಂಬ ಸಂಖ್ಯೆಯನ್ನು ಏರ್ ಟೆಲ್ ಸಂಂಸ್ಥೆ ನೀಡಿರುತ್ತದೆ. ಸದರಿ ಅರ್ಜಿ ಸಲ್ಲಿಸುವಾಗ ಅಸಿ ಲೊಕೇಶ್ ಎಂಬ ವ್ಯಕ್ತಿ ಆತನ ಚಾಲಾನಾ ಪರವಾನಗಿಯ ನಕಲನ್ನು ನೀಡಿರುತ್ತಾನೆ ಸಾಕ್ಷಿಯು ಚಾಲಾನಾ

ಪರವಾನಗಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ಮೇಲ್ಕಂಡ ಮೊಬೈಲ್ ಸಂಖ್ಯೆಯನ್ನು ಯಾರೋ ಅಪರಾಧ ಕೃತ್ಯ ಎಸಗಲು ಬಳಸಿದ್ದಾರೆ ಎಂದು ಡಿಸೆಂಬರ್ 2010 ರಲ್ಲಿ ಸಿಸಿಬಿ ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ ಅವರಿಗೆ ನಾನು ಮೇಲ್ಕಂಡ ಸಿಮ್ ಕಾರ್ಡ್‌ನ್ನು ಸಿಎಎಫ್ ಮತ್ತು ಗುರುತಿನ ಚೀಟಿ ಪಡೆದು ಲೋಕೇಶ್ ಎಂಬುವರಿಗೆ ನೀಡಿರುತ್ತೇನೆ ಎಂದು ತಿಳಿಸಿರುತ್ತೇನೆ.

ಪಾಟೀ ಸವಾಲುಃ ಶ್ರೀ ಎನ್ ಎನ್ 3ನೇ ಆರೋಪಿ ಪರ ವಕೀಲರಿಂದಃ

ಸಿಸಿಬಿ ಪೋಲೀಸರು ಯಾವುದೇ ಆರೋಪಿತರನ್ನು ನನ್ನ ಮುಂದೆ ಕರೆದು ಕೊಂಡು ಬಂದಿರುವುದಿಲ್ಲ, ಈ ಸಿಮ್ ಕಾರ್ಡ್‌ನ್ನು ಯಾರು ಉಪಯೋಗಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ,

ಪಾಟೀ ಸವಾಲುಃ 4ನೇ ಮತ್ತು 5ನೇ ಆರೋಪಿ ಪರ ವಕೀಲರಿಂದಃ

ಆರೋಪಿ-4 ಮತ್ತು ಆರೋಪಿ-5 ರ ವಕೀಲರುಗಳು ಗೈರುಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

**(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).**

ಓ. ಹೇ. ಕೇ. ಸ. ಇ

1ನೇ ಅ. ಮು. ಮ. ದಂ. ನ್ಯಾ.